REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 । ಸಂಚಿಕೆ : 33 । ನವೆಂಬರ್ 23, 2022 । ಬುಧವಾರ । ಪುಟಗಳು : 8 । ಬೆಲೆ : 2/-

### ಬೆಳಗಾವಿಯಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹ – 2022

## ಸಹಕಾರ ಶಿಕ್ಷಣ, ವೃತ್ತಿಪರ ನಿರ್ವಹಣೆಯನ್ನು ಮುಖ್ಯವಾಹಿನಿಗೆ ತರಲು ಪುನರ್ ನಿರ್ಮಿಸುವ ದಿನಾಚರಣೆ



**ಬೆಳಗಾವಿ :** ದಿನಾಂಕ : 16.11.2022ರಂದು "ಸಹಕಾರ ಶಿಕ್ಷಣ, ವೃತ್ತಿಪರ ನಿರ್ವಹಣೆಯನ್ನು ಮುಖ್ಯವಾಹಿನಿಗೆ ತರಲು ಪುನರ್ ನಿರ್ಮಿಸುವುದು" ದಿನಾಚರಣೆಯ ವಿಷಯವಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು, ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಬೆಳಗಾವಿ, ಬೆಳಗಾವಿ ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಬೆಳಗಾವಿ, ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್., ಬೆಳಗಾವಿ., ಬೆಳಗಾವಿ ಜಿಲ್ಲೆಯ ಪಟ್ಟಣ ಸಹಕಾರ ಬ್ಯಾಂಕುಗಳು / ಸಹಕಾರ ಸಂಘಗಳು / ಸೌಹಾರ್ದ ಸಹಕಾರ ಸಂಘಗಳು ಹಾಗೂ ಸಹಕಾರ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣದಲ್ಲಿ ಆಯೋಜಿಸಿತ್ತು.

ಈ ಸಮಾರಂಭವನ್ನು ರಾಜ್ಯಸಭಾ ಸದಸ್ಯರಾದ ಈರಣ್ಣ ಕಡಾಡಿ ಉದ್ಘಾಟಿಸಿ ಮಾತನಾಡಿ ದೇಶದಲ್ಲಿಯೇ ಮೊದಲ ಬಾರಿಗೆ ಸಹಕಾರ ಚಳವಳಿ ಪ್ರಾರಂಭವಾಗಿದ್ದು ನಮ್ಮ ದೇಶದಲ್ಲಿ. ಅದು ನಮ್ಮ ಹತ್ತಿರದ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ. ಸಹಕಾರಿ ಚಳುವಳಿ ಇಡೀ ವಿಶ್ವದಲ್ಲಿಯೇ ದೊಡ್ಡ ಪ್ರಮಾಣದಲ್ಲಿ ಇದ್ದರೆ ಅದು ಭಾರತದಲ್ಲಿ. 8.5ಲಕ್ಷಕ್ಕೂ ಹೆಚ್ಚು ಸಹಕಾರಿ ಜಾಲವನ್ನು ದೇಶವು ಹೊಂದಿದೆ. ಶೇ.90ರಷ್ಟು ಗ್ರಾಮಗಳಿಗೆ ಸಹಕಾರ ಕ್ಷೇತ್ರ ತನ್ನ ಕಾರ್ಯ ಚಟುವಟಿಕೆಯನ್ನು ವಿಸ್ತರಿಸಿದೆ. ಆ ಪ್ರದೇಶದ ಸಮಗ್ರ ಬೆಳವಣಿಗೆಗಾಗಿ ಜನರ ಸಾಮಾಜಿಕ ಆರ್ಥಿಕ ಬೆಳವಣಿಗೆಗಾಗಿ ಸಹಕಾರಿ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಸಹಕಾರಿ ಕ್ಷೇತ್ರಕ್ಕೆ ವಿಶೇಷವಾದ ಆದ್ಯತೆ ನೀಡಬೇಕೆಂದು ಕೇಂದ್ರ ಸರ್ಕಾರವು ಸಹಕಾರ ಸಚಿವಾಲಯವನ್ನು ಸ್ಥಾಪಿಸಿದೆ ಎಂದರು.



3ನೇ ಪುಟಕ್ಕೆ...

2 ರಾಷ್ಟ್ರೀಕೃತ ಬ್ಯಾಂಕುಗಳ ಸಿಇಒ ಅವಧಿ ಗರಿಷ್ಠ 10 ವರ್ಷಕ್ಕೆ ಏರಿಕೆ

5 ದಕ್ಷತೆ, ಪ್ರಾಮಾಣಿಕತೆಯಿಂದ ಸಾಧನೆ : ಸಚಿವ ಹಾಲಪ್ಪ ಆಚಾರ

7 ಆಡಳಿತ ಮಂಡಳಿ ನಿರ್ದೇಶಕರು

## ಅತ್ಮೀಯ ಸಹಕಾರಿಗಳೇ...



### ಮುಖ್ಯಮಂತ್ರಿಗಳ ಶುಭ ನುಡಿಗಳು ಶೀಘ್ರವೇ ಸಾಕಾರಗೊಳ್ಳಲಿ

ಈ ಸಾರಿ ನಮ್ಮ ಮಹಾಮಂಡಳದ ನೇತೃತ್ವದಲ್ಲಿ ಬೆಳಗಾವಿಯಲ್ಲಿ ನಡೆದ 69ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಕಾರಣಾಂತರಗಳಿಂದ ನಾನು ಭಾಗವಹಿಸಲು ಸಾಧ್ಯವಾಗದಿದ್ದಕ್ಕೆ ನಿಮ್ಮೆಲ್ಲರ ಕ್ಷಮೆ ಕೋರುವೆ. ನಾನು ಕಾರ್ಯನಿಮಿತ್ತ ಹೊರಗಿದ್ದರೂ, ನನ್ನ ಮನ ಸಪ್ತಾಹದ ಕಡೆಗೇ ಎಳೆಯುತ್ತಿತ್ತು. ನೀವೆಲ್ಲರೂ ಪಾಲ್ಗೊಂಡು ಸಡಗರಿಸಿ, ಸಂಭ್ರಮಿಸಿದ ವಿಷಯ ತಿಳಿದು ನನಗೆ ಸಂತಸವಾಯಿತು.

ಇರಲಿ, ಸಪ್ತಾಹ ಸಮಾರಂಭದಲ್ಲಿ ನಾನಾಡಬೇಕೆನಿಸಿದ ಕೆಲ ಮಾತುಗಳನ್ನು ಈ ಅಂಕಣದ ಮೂಲಕ ನಿಮ್ಮೊಂದಿಗೆ ಹಂಚಿಕೊಳ್ಳ ಬಯಸುತ್ತೇನೆ. ನಮ್ಮ ದೇಶದ ಆರ್ಥಿಕಾಭಿವೃದ್ಧಿಯಲ್ಲಿ ನಮ್ಮ ಸಹಕಾರ ಕ್ಷೇತ್ರದ ಕೊಡುಗೆ ಅಪಾರವಾಗಿರುವುದನ್ನು ನೀವೆಲ್ಲರೂ ಬಲ್ಲಿರಿ. ಇದರಲ್ಲಿ ಸಮಾಜದ ಎಲ್ಲ ವರ್ಗದ, ಎಲ್ಲ ಜನರ ಅದರಲ್ಲೂ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದವರು ಸಹಕಾರಿ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಉತ್ತಮ ಬದುಕು ಕಟ್ಟಿಕೊಳ್ಳುವ ಮೂಲಕವಾಗಿಯೇ ದೇಶದ ಅಭಿವೃದ್ಧಿಗೆ ತಮ್ಮ ಕಾಣಿಕೆ ನೀಡುತ್ತಿರುವುದು ನಮಗೆಲ್ಲ ಹೆಮ್ಮೆಯ ವಿಷಯವಾಗಿದೆ.

ಈ ಬಾರಿ ಸೇಡಂನಲ್ಲಿ ನಡೆದ 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನಾ ಸಮಾರಂಭದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ನಾಡಿನ ಎಲ್ಲರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಸಹಕಾರದ ಗುಣಧರ್ಮ ರಾಜ್ಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸೇರಿ ಎಲ್ಲಾ ರಂಗಗಳಲ್ಲಿ ಬೆಳವಣಿಗೆ ಸಾಧಿಸಿದ ಬಗ್ಗೆ ಮಾತನಾಡಿದ್ದಾರೆ. ಸಹಕಾರ ಸರ್ವಸ್ಪರ್ಶಿ, ಸರ್ವವ್ಯಾಪಿಯಾಗಿ ವಿಸ್ತಾರಗೊಳ್ಳಬೇಕು ಹಾಗೂ ಮುಂದಿನ ದಿನಗಳಲ್ಲಿ ಈ ಕ್ಷೇತ್ರ ಇತರ ಎಲ್ಲ ಕ್ಷೇತ್ರಗಳಿಗಿಂತ ಮಂಚೂಣಿಯಲ್ಲಿರಬೇಕು ಎಂದಿರುವುದು ಸಹಕಾರಿಗಳಾದ ನಾವೆಲ್ಲರೂ ಹೆಮ್ಮೆಪಡುವ ಮಾತಾಗಿದೆ. ಅವರ ಶುಭ ನುಡಿಗಳು ಶೀಘ್ರವೇ ಸಾಕಾರಗೊಳ್ಳಲಿ ಎಂದು ಆಶಿಸುತ್ತೇನೆ.

ನಿತ್ಯ ಸಹಕಾರ ಚಿಂತನೆಯಲ್ಲಿ ತೊಡಗುವ ನಮ್ಮಗಳಿಗೆ ಒಂದು ಕನಸಿದೆ. ರಾಜ್ಯದ ಪ್ರತಿ ಗ್ರಾಮದಲ್ಲಿಯೂ ಕನಿಷ್ಠ ಒಂದು ಸಹಕಾರಿ ಸಂಘವಾದರೂ ಸ್ಥಾಪನೆಯಾಗಬೇಕೆನ್ನುವುದು ಅದರಲ್ಲಿ ಒಂದಾಗಿದೆ. ಈ ಕನಸು ನನಸಾಗಲು ನಮ್ಮ ಯುವ ಚೇತನಗಳು ಮುಂದಾಗಬೇಕಿದೆ. ಕೃಷಿಕರು ನೇಕಾರರು, ಕಮ್ಮಾರರು, ಇನ್ನಿತರ ಕುಶಲಕರ್ಮಿಗಳ, ಬಡವರ ಸಹಕಾರ ಸಂಘಗಳಿಗೆ ಬಲ ತುಂಬಬೇಕಿದೆ.

ಇದೆಲ್ಲವೂ ಸಾಧ್ಯವಾಗುವುದೆಂಬ ಆಶಯದೊಂದಿಗೆ, ನಮ್ಮ ಪಟ್ಟಣ ಸಹಕಾರ ಕ್ಷೇತ್ರದಲ್ಲಿ ತಮ್ಮ ಅವಿರತ ಸೇವೆ ಸಲ್ಲಿಸುತ್ತಿರುವ, ಈ ಬಾರಿಯ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ನಮ್ಮ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ಹಾಗೂ ನಮ್ಮವರೇ ಆದ ಶ್ರೀ ಅರವಿಂದ ಪಾಟೀಲ, ಶ್ರೀಮತಿ ಆಶಾ ಪಿ. ಕೋರೆ, ಶ್ರೀ ಕುಮಾರ ಬಾಹು ಬದನಿಕಾಯಿ, ಶ್ರೀ ಮಲ್ಲಿಕಾರ್ಜುನ ಡಿ. ಚುನಮರಿ, ಶ್ರೀ ಅನಿಲ ಪಾಟೀಲ, ಶ್ರೀ ಚಂದ್ರಶೇಖರ ಎಸ್. ಜಿಗಜಿನ್ನಿ, ಶ್ರೀ ಅರವಿಂದ ಬಿ. ಮಂಗಳೂರ, ಶ್ರೀ ವಿಠ್ಠಲಸಿಂಗ್ ಅಮರಸಿಂಗ್ ಹಜೇರಿ, ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ ಅವರುಗಳೊಂದಿಗೆ ಪುರಸ್ಕೃತರಾದ ಎಲ್ಲ ಸಹಕಾರಿಗಳನ್ನು ಅಭಿನಂದಿಸುತ್ತೇನೆ.

▶▶ ಎಚ್.ಕೆ. ಪಾಟೀಲ
ಅಧ್ಯಕ್ಷರು

## ರಾಷ್ಟ್ರೀಕೃತ ಬ್ಯಾಂಕುಗಳ ಸಿಇಒ ಅವಧಿ ಗರಿಷ್ಠ 10 ವರ್ಷಕ್ಕೆ ಏರಿಕೆ




**ನವದೆಹಲಿ :** ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರ ಸೇವಾ ಅವಧಿಯನ್ನು ಗರಿಷ್ಠ 10 ವರ್ಷಗಳವರೆಗೆ ಹೆಚ್ಚಿಸಲಾಗಿದೆ.

ಕೇಂದ್ರ ಸರ್ಕಾರವು ನವೆಂಬರ್ 17 ರಂದು ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ನೇಮಕಾತಿ ಅವಧಿಯನ್ನು 5 ವರ್ಷಗಳಿಂದ 10 ವರ್ಷಗಳವರೆಗೆ ವಿಸ್ತರಿಸಲಾಗಿದೆ. ಇದು 60 ವರ್ಷಗಳ ನಿವೃತ್ತಿ ವಯಸ್ಸಿನ ಮಿತಿಗೆ ಒಳಪಟ್ಟಿದೆ.

ಈ ಮೊದಲು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸಿಇಒ ಅವಧಿಯು ಗರಿಷ್ಠ 5 ವರ್ಷ ಅಥವಾ 60 ವರ್ಷ ವಯಸ್ಸು; ಇವುಗಳಲ್ಲಿ ಯಾವುದು ಮೊದಲೋ ಅದು ಅನ್ವಯವಾಗುವಂತೆ ಇತ್ತು. ಎಲ್ಲ ಕೇಂದ್ರೋದ್ಯಮಗಳ ಪೂರ್ಣಾವಧಿ ನಿರ್ದೇಶಕರಿಗೂ ಇದು ಅನ್ವಯ ಆಗುತ್ತದೆ. ಉತ್ತಮ ಪ್ರತಿಭೆಗಳನ್ನು ಬ್ಯಾಂಕಿಂಗ್ ವಲಯದಲ್ಲಿ ಉಳಿಸಿಕೊಳ್ಳಲು ಈ ನಿರ್ಧಾರವು ಸರ್ಕಾರಕ್ಕೆ ನೆರವಾಗಲಿದೆ.

ವ್ಯವಸ್ಥಾಪಕ ನಿರ್ದೇಶಕರು ಸೇರಿದಂತೆ ಪೂರ್ಣಾವಧಿ ನಿರ್ದೇಶಕರು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಆರಂಭಿಕವಾಗಿ ಐದು ವರ್ಷಗಳನ್ನು ಮೀರದಂತೆ ಅಧಿಕಾರದಲ್ಲಿ ಇರಬಹುದು. ಆ ಬಳಿಕ ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ನ ಸಲಹೆಯ ಮೇರೆಗೆ ಮತ್ತೆ ಗರಿಷ್ಠ ಐದು ವರ್ಷಗಳ ಅವಧಿಗೆ ಮರು ನೇಮಕ ಮಾಡಬಹುದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

45ರಿಂದ 50 ವರ್ಷ ವಯಸ್ಸಿನಲ್ಲಿ ಇರುವಾಗಲೇ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳ ಆಡಳಿತ ಮಂಡಳಿಯಲ್ಲಿ ಪೂರ್ಣಾವಧಿ ನಿರ್ದೇಶಕರಾದವರಿಗೆ ಈ ತಿದ್ದುಪಡಿಯಿಂದ ಹೆಚ್ಚಿನ ಪ್ರಯೋಜನ ಸಿಗಲಿದೆ.

... 1ನೇ ಪುಟದಿಂದ

ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಮಾತನಾಡಿ ಸಹಕಾರ ಕ್ಷೇತ್ರ ನಮ್ಮ ರಾಷ್ಟ್ರದಲ್ಲಿ ಉತ್ತಮವಾಗಿ ಬೆಳೆದು ಬಡ ಹಾಗೂ ಮಧ್ಯಮ ವರ್ಗದವರಿಗೆ ಆರ್ಥಿಕ ಸಹಾಯ ಒದಗಿಸಿ, ದೊಡ್ಡ ಪಾತ್ರವಹಿಸಿದೆ. ನಮ್ಮ ರಾಜ್ಯದಲ್ಲಿ 256 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, 1051 ಶಾಖೆಗಳನ್ನು ಹೊಂದಿ 24 ಲಕ್ಷ ಸದಸ್ಯರಿದ್ದು, ರೂ. 50 ಸಾವಿರ ಕೋಟಿ ಠೇವಣಿ ಹೊಂದಿ ರೂ. 28 ಸಾವಿರ ಕೋಟಿ ಸಾಲ ನೀಡಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಭಾರತೀಯ ರಿಜರ್ವ ಬ್ಯಾಂಕಿನಿಂದ ಲೈಸೆನ್ಸ್ ಪಡೆದು ಗ್ರಾಹಕರ ಠೇವಣಿಗೆ ಡಿ.ಐ.ಜಿ.ಸಿ ಯಿಂದ ವಿಮೆ ಸೌಲಭ್ಯವನ್ನು ಪಡೆದಿರುತ್ತದೆ. ನಾವೆಲ್ಲರೂ ಸಹಕಾರ ಸಂಸ್ಥೆಗಳನ್ನು ಬಲಪಡಿಸಬೇಕೆಂದು ಈ ಮೂಲಕ ಹೇಳ ಬಯಸುತ್ತೇನೆ. ಕೇಂದ್ರ ಸರ್ಕಾರದಲ್ಲಿ ಹೊಸದಾಗಿ ಸಹಕಾರ ಸಚಿವಾಲಯ ಸೃಜಿಸಿದ್ದು, ಮಾನ್ಯ ಅಮೀತ್ ಷಾರವರು ಸಹಕಾರ ಖಾತೆಯನ್ನು ಹೊಂದಿರುತ್ತಾರೆ. ದೇಶದ ಮಿಶ್ರ ಆರ್ಥಿಕ ನೀತಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮಹತ್ವವಾದದ್ದು. ಕೇಂದ್ರ ಸರ್ಕಾರ, ಕೇಂದ್ರ ಪರಿಷ್ಕೃತ ಯೋಜನೆಯಡಿಯಲ್ಲಿ ಹಾಗೂ ಆತ್ಮನಿರ್ಬರ ಅಡಿಯಲ್ಲಿ ಸಹಕಾರ ಸಂಘಗಳು ಕಂಪ್ಯೂಟರಿಕರಣ, ಡೈರಿ ಉದ್ಯಮಕ್ಕೆ ಆರ್ಥಿಕ ನೆರವು ಮತ್ತು ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಹುಸೇವಾ ಕೇಂದ್ರಗಳಾಗಿ ಪರಿವರ್ತಿಸಲು ಕ್ರಮವಿಡಲಾಗಿದೆ. ಸಹಕಾರ ಸಂಘಗಳು ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ, ಉತ್ತಮ ಗುಣಲಕ್ಷಣಗಳಾದ ಪಾರದರ್ಶಕತೆ, ಉತ್ತರಾದಾಯಿತ್ವ, ವೃತ್ತಿಪರತೆ, ಲಾಭಾಂಶ, ಮಾಹಿತಿ ಮತ್ತು ತಂತ್ರಜ್ಞಾನ, ಪ್ರಾಮಾಣಿಕತೆ ಹಾಗೂ ಬದ್ಧತೆಗಳನ್ನು ಅಳವಡಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ದೇಶದ ಒಟ್ಟು ಆರ್ಥಿಕತೆಯಲ್ಲಿ ಸಹಕಾರ ಸಂಸ್ಥೆಗಳ ಪಾಲು ಗಣನೀಯವಾಗಿ ಪ್ರಗತಿಯಲ್ಲಿದೆ. ಆದಕಾರಣ ದೇಶದ ಆರ್ಥಿಕ ಪ್ರಗತಿ ಸಹಕಾರ ಬೆಳವಣಿಗೆಯ ಮೂಲಕ ಸಾಧ್ಯವಿದೆ. ಸಹಕಾರ ರಂಗದಲ್ಲಿ ಉದ್ಯೋಗ ಸೃಷ್ಠಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸ್ವ-ಉದ್ಯೋಗಕ್ಕೆ ಸಾಲ ನೀಡುವುದರ ಮೂಲಕ ಆದ್ಯಗಮನ ನೀಡಲಾಗಿದೆ. ಇದರಿಂದ ಯುವ ಪೀಳಿಗೆಯನ್ನು ಸಹಕಾರ ಕ್ಷೇತ್ರಕ್ಕೆ ಆಕರ್ಷಿಸಲು ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.



ಪ್ರಾರಂಭದಲ್ಲಿ ಸಪ್ತವರ್ಣದ ಸಹಕಾರ ಧ್ವಜಾರೋಹಣವನ್ನು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರಾದ ಡಿ.ಟಿ. ಪಾಟೀಲರವರು ನೆರವೇರಿಸಿದರು. ವಸ್ತುಪ್ರದರ್ಶನ ಮಳಿಗೆಗಳ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಜಗದೀಶ ಎಂ. ಕವಟಗಿಮಠ ಉದ್ಘಾಟಿಸಿದರು. ಸಹಕಾರ ವಾರ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಉಪಾಧ್ಯಕ್ಷರಾದ ಬಿ.ಎಸ್. ಪರಮಶಿವಯ್ಯ ನವರು ಬಿಡುಗಡೆಗೊಳಿಸಿದರು. ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ರಮೇಶ್ ವಿ. ಕತ್ತಿ ರವರು ಬಿಡುಗಡೆಗೊಳಿಸಿದರು. ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ರವರ ಭಾವಚಿತ್ರಕ್ಕೆ ಅತಿಥಿಗಳೆಲ್ಲರೂ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.





**ಸಹಕಾರ ರತ್ನ ಪ್ರಶಸ್ತಿ ಪ್ರಧಾನ :** ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕ ಶ್ರೀ ಅರವಿಂದ ಪಾಟೀಲ, ಬೆಳಗಾವಿ ಜಿಲ್ಲಾ ರಾಣಿ ಚೆನ್ನಮ್ಮ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಆಶಾ ಪಿ. ಕೋರೆ, ಸದಲಗಾ ಜನತಾ ಸಹಕಾರ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕುಮಾರ ಬಾಹು ಬದನಿಕಾಯಿ, ಗೋಕಾಕ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಡಿ. ಚುನಮರಿ, ಸಹಕಾರಿ ಅನಿಲ ಪಾಟೀಲ, ಸಹಕಾರಿ ಶ್ರೀ ಚಂದ್ರಶೇಖರ ಎಸ್. ಜಿಗಜಿನ್ನಿ, ಇಳಕಲ ಸಹಕಾರ ಬ್ಯಾಂಕಿನ ನಿರ್ದೇಶಕರಾದ ಶ್ರೀ ಅರವಿಂದ ಬ. ಮಂಗಳೂರ, ತಾಳಿಕೋಟಿ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಠ್ಠಲಸಿಂಗ್ ಅಮರಸಿಂಗ್ ಹಜೇರಿ, ಮಹಾಮಂಡಳದ ನಿರ್ದೇಶಕರು ಹಾಗೂ ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರು ಆದ ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ ರವರುಗಳಿಗೆ ಸಹಕಾರ ರತ್ನ ಪ್ರಶಸ್ತಿ ಪ್ರಧಾನ ಮಾಡಲಾಯಿತು.

4ನೇ ಪುಟಕ್ಕೆ...

...3ನೇ ಪುಟದಿಂದ

ಸಮಾರಂಭದ ಅಧ್ಯಕ್ಷತೆಯನ್ನು ಬೆಳಗಾವಿ ಉತ್ತರ ವಿಧಾನಸಭೆ ಕ್ಷೇತ್ರದ ಶಾಸಕ ಅನಿಲ ಎಸ್. ಬೆನಕೆ ರವರು ವಹಿಸಿದ್ದರು. ಸಮಾರಂಭದ ಪ್ರಾರಂಭದಲ್ಲಿ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಜಗದೀಶ ಮ. ಕವಟಗಿಮಠ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಚಿಕ್ಕೋಡಿ ಲೋಕಸಭಾ ಸದಸ್ಯರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ, ಮಾಜಿ ಸಂಸದರು ಹಾಗೂ ಹಾಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪ್ರಕಾಶ ಹುಕ್ಕೇರಿ, ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಡಿ.ಟಿ. ಪಾಟೀಲ, ಶ್ರೀ ಬಸವರಾಜ ಈ. ಕಲ್ಯಾಣಶೆಟ್ಟಿ, ಶ್ರೀ ರಾಜಕುಮಾರ ಬಿ. ಬಾದವಾಡಗಿ, ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ, ಕ.ರಾ.ಸ.ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಬಸವರಾಜ ನಿ. ಅರಬಗೊಂಡ, ಶ್ರೀ ಬಾಪುಗೌಡ ಡಿ. ಪಾಟೀಲ, ಶ್ರೀ ಈರಣ್ಣ ಚ. ಪಟ್ಟಣಶೆಟ್ಟಿ, ಬೆಳಗಾವಿ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಶ್ರೀ ಬಿ.ಡಿ. ಪಾಟೀಲ, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಶ್ರೀ ಎಸ್. ಅರಳಿ ಸೂರ್ಯಕಾಂತ್, ಬೆಳಗಾವಿ ಪ್ರಾಂತ, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರಾದ ಶ್ರೀ ಜಿ.ಎಂ.ಪಾಟೀಲ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಕ.ರಾ.ಸ. ಮಹಾಮಂಡಳದ ಸಮನ್ವಯಾಧಿಕಾರಿ ಶ್ರೀ ಎಸ್.ಎನ್. ವೇಣುಗೋಪಾಲ್, ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್ ನಿ., ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಹಾಲಪ್ಪ ಅ. ಜಗ್ಗಿನವರ ಮತ್ತಿತರರು ಉಪಸ್ಥಿತರಿದ್ದರು. ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಹೆಚ್.ಎಸ್. ನಾಗರಾಜಯ್ಯ ವಿಶೇಷ ಉಪನ್ಯಾಸ ನೀಡಿದರು.

## ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಉಪಾಧ್ಯಕ್ಷರು / ಹಾಲಿ ನಿರ್ದೇಶಕರುಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ನಿರ್ದೇಶಕರುಗಳು



ಶ್ರೀ ಬಿ.ಎಸ್. ಪರಮಶಿವಯ್ಯ



ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ



ಡಾ॥ ಎಂ.ಬಿ. ಮಂಜೇಗೌಡ



ಡಾ॥ ಪಿ.ಎಲ್. ವೆಂಕಟರಾಮರೆಡ್ಡಿ



ಶ್ರೀಮತಿ ಆಶಾ ಪಿ. ಕೋರೆ



ಶ್ರೀ ಕುಮಾರ ಬಾಹು ಬದನಿಕಾಯಿ



ಶ್ರೀ ವಿಠ್ಠಲಸಿಂಗ್ ಅಮರಸಿಂಗ್ ಹಜೇರಿ



ಶ್ರೀ ಯಶಪಾಲ್ ಎ. ಸುವರ್ಣ



ಶ್ರೀ ಅರವಿಂದ ಬಿ. ಮಂಗಳೂರು



ಶ್ರೀ ಮಲ್ಲಿಕಾರ್ಜುನ ಡಿ. ಚುನಮರಿ

**ಬೆಂಗಳೂರು :** ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಉಪಾಧ್ಯಕ್ಷರು ಹಾಗೂ ಬೆಂಗಳೂರು ವೀರಶೈವ ಸಹಕಾರಿ ಬ್ಯಾಂಕಿನ ಅಧ್ಯಕ್ಷರೂ ಆದ ಶ್ರೀ ಬಿ.ಎಸ್. ಪರಮಶಿವಯ್ಯ, ಮಹಾಮಂಡಳದ ನಿರ್ದೇಶಕರು ಹಾಗೂ ಚೈತನ್ಯ ಮಹಿಳಾ ಸಹಕಾರ ಬ್ಯಾಂಕ ನಿ., ವಿಜಯಪುರ ಇದರ ಅಧ್ಯಕ್ಷರೂ ಆದ ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ, ಮಹಾಮಂಡಳದ ನಿರ್ದೇಶಕರು ಹಾಗೂ ದಿ ರೈಲ್ವೆ ಸಹಕಾರ ಬ್ಯಾಂಕಿನ ನಿರ್ದೇಶಕರಾದ ಡಾ॥ ಎಂ.ಬಿ. ಮಂಜೇಗೌಡ, ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು ಹಾಗೂ ಸ್ವರ್ಣ ಭಾರತಿ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಡಾ॥ ಪಿ.ಎಲ್. ವೆಂಕಟರಾಮರೆಡ್ಡಿ, ಬೆಳಗಾವಿ ಜಿಲ್ಲಾ ರಾಣಿ ಚೆನ್ನಮ್ಮಾ ಮಹಿಳಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಆಶಾ ಪಿ. ಕೋರೆ, ಸದಲಗಾ ಜನತಾ ಕೋ-ಆಪರೇಟಿವ್ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕುಮಾರ ಬಾಹು ಬದನಿಕಾಯಿ, ತಾಳಿಕೋಟಿ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಠ್ಠಲಸಿಂಗ್ ಅಮರ್‌ಸಿಂಗ್ ಹಜೇರಿ, ಉಡುಪಿ ಮಹಾಲಕ್ಷ್ಮೀ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಯಶಪಾಲ್ ಎ. ಸುವರ್ಣ, ಇಳಕಲ್ ಸಹಕಾರ ಬ್ಯಾಂಕಿನ ನಿರ್ದೇಶಕರಾದ ಶ್ರೀ ಅರವಿಂದ ಬಿ. ಮಂಗಳೂರು, ಗೋಕಾಕ ಅರ್ಬನ್ ಕೋ-ಆಪ್ ಕ್ರೆಡಿಟ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಡಿ. ಚುನಮರಿ ರವರುಗಳಿಗೆ 2022ನೇ ಸಾಲಿನ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು ಹಾಗೂ ಮಹಾಮಂಡಳದ ನಿರ್ದೇಶಕ ಮಂಡಳಿ ಸದಸ್ಯರು, ಅಧಿಕಾರಿ ಮತ್ತು ಸಿಬ್ಬಂಧಿ ವರ್ಗದವರು ಅಭಿನಂದಿಸಿರುತ್ತಾರೆ.

# ದಕ್ಷತೆ, ಪ್ರಾಮಾಣಿಕತೆಯಿಂದ ಸಾಧನೆ : ಸಚಿವ ಹಾಲಪ್ಪ ಆಚಾರ



**ಧಾರವಾಡ :** ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ನೇತೃತ್ವದಲ್ಲಿ ನಗರದ ಧಾರವಾಡ ಸಹಕಾರ ಹಾಲು ಒಕ್ಕೂಟದ ಆವರಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ, ಕೆಸಿಸಿ ಬ್ಯಾಂಕ ಹಾಗೂ ವಿವಿಧ ಸಹಕಾರ ಸಂಘಗಳ ಆಶ್ರಯದಲ್ಲಿ ದಿನಾಂಕ:15.11.2022ರಂದು ಏರ್ಪಡಿಸಿದ್ದ 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರಂಭವನ್ನು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಹಾಲಪ್ಪ ಆಚಾರ ರವರು ಉದ್ಘಾಟಿಸಿ ಮಾತನಾಡುತ್ತಾ ಇಚ್ಛಾಶಕ್ತಿ, ಪ್ರಾಮಾಣಿಕತೆ ಹಾಗೂ ದಕ್ಷತೆ ಇದ್ದಲ್ಲಿ ಯಾವುದೇ ಕ್ಷೇತ್ರದಲ್ಲಾದರೂ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಗದಗ ಜಿಲ್ಲೆಯ ಕಣಗಿನಹಾಳದಲ್ಲಿ 12 ಜನ ರೈತರೊಂದಿಗೆ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರು ಆರಂಭಿಸಿದ ಸಹಕಾರ ಕ್ರಾಂತಿ ದೇಶಾದ್ಯಂತ ವ್ಯಾಪಿಸಿದೆ. ಈ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸಿದ ಮಹನೀಯರನ್ನು ನಾವೆಲ್ಲರೂ ಸದಾ ಸ್ಮರಿಸಬೇಕು. ಸಹಕಾರಿ ಕ್ಷೇತ್ರ ಸಾಕಷ್ಟು ಬೆಳೆದಿದ್ದರೂ ಇನ್ನು ಅನೇಕ ಕೆಲಸಗಳು ಆಗಬೇಕಿದೆ. ಸಹಕಾರ ಸಂಸ್ಥೆಗಳ ಬೆಳವಣಿಗೆ ಮತ್ತು ಭವಿಷ್ಯ ಕುರಿತು ಪ್ರತಿಯೊಬ್ಬ ಸಹಕಾರಿ ತನ್ನ ಪಾತ್ರವನ್ನು ಮನಗಾಣಬೇಕಿದೆ. ಗ್ರಾಮೀಣ ಅಭಿವೃದ್ಧಿಗೆ ಈ ಸಹಕಾರವೇ ಶಕ್ತಿ ಎಂದರು. ಪ್ರಾರಂಭದಲ್ಲಿ ಸಚಿವ ಹಾಲಪ್ಪ ಆಚಾರ ರವರು ಗೋಪೂಜೆ ನೆರವೇರಿಸಿದರು. ಶಾಸಕ ಸಿ.ಎಂ. ನಿಂಬಣ್ಣವರ ಸಹಕಾರ ಧ್ವಜಾರೋಹಣ ನೆರವೇರಿಸಿದರು. ಡಾ. ಡಿ.ಎನ್. ಹೆಗಡೆ ವಿಶೇಷ ಉಪನ್ಯಾಸ ನೀಡಿದರು. ಧಾರವಾಡದ ಪ್ರತಾಪ ಚವ್ಹಾಣ, ಮಲ್ಲಿಕಾರ್ಜುನ ಹೊರಕೇರಿ ಸೇರಿ ಒಕ್ಕೂಟ ವ್ಯಾಪ್ತಿಯ ಜಿಲ್ಲೆಯ 11 ಜನರಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಾಜಿ ಶಾಸಕ ಎಸ್.ಐ. ಚಿಕ್ಕನಗೌಡರ, ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷ ಜಗದೀಶ ಕವಟಗಿಮಠ, ಸಹಕಾರ ಮಹಾಮಂಡಳದ ನಿರ್ದೇಶಕರುಗಳಾದ ಜಿ.ಪಿ. ಪಾಟೀಲ, ಈರಣ್ಣ ಪಟ್ಟಣಶೆಟ್ಟಿ, ಬಾಪುಗೌಡ ಪಾಟೀಲ, ಸಹಕಾರಿಗಳಾದ ಶಂಕರಪ್ಪ ರಾಯನಾಳ, ಸಹಕಾರ ಸಂಘಗಳ ಉಪನಿಬಂಧಕಿ ರಂಜನಾ ಪೋಳ, ಬಸವರಾಜ ಅರಬಗೊಂಡ, ನೀಲಕಂಠಪ್ಪ ಅಸೂಟಿ, ಹನುಮಂತಗೌಡ ಹಿರೇಗೌಡ್ರ, ಜಿ.ಎಂ. ಪಾಟೀಲ, ಸುರೇಶ್ಚಂದ್ರ ಹೆಗಡೆ, ಗೀತಾ ಮರಲಿಂಗಣ್ಣವರ, ಮಂಜುನಾಥಗೌಡ ಪಾಟೀಲ, ಸುರೇಶ ಬಣವಿ, ಪರಶುರಾಮ ನಾಯ್ಕ, ಶಂಕರ ಹೆಗಡೆ, ಹನುಮಂತಗೌಡ ಭರಮಣ್ಣವರ, ಬಸನಗೌಡ ಮೇಲಿನಮನಿ, ಧಾರವಾಡ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಡಾ.ಕೆ.ಎಂ. ಲೋಹಿತೇಶ್ವರ ಮತ್ತಿತರರು ಉಪಸ್ಥಿತರಿದ್ದರು. \

ಧಾರವಾಡ ಹಾಲು ಒಕ್ಕೂಟದ ಅಧ್ಯಕ್ಷ ಶಂಕರ ಮುಗದ ಸ್ವಾಗತಿಸಿದರು. ಕರ್ನಾಟಕ ಹಾಲು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಯಾ ರಾಮನ್ ನಿರೂಪಿಸಿದರು.

# ಎಂ.ಸಿ.ಸಿ. ಬ್ಯಾಂಕಿನ ಉಡುಪಿ ಶಾಖೆಯ ಗ್ರಾಹಕ ಸಂಪರ್ಕ ಸಭೆ




ಬ್ಯಾಂಕಿನ ಶತಮಾನೋತ್ತರ ದಶಮಾನೋತ್ಸವದ ಅಂಗವಾಗಿ ಮಂಗಳೂರು ಕಥೊಲಿಕ್ ಕೋ-ಆಪರೇಟಿವ್ ಬ್ಯಾಂಕ್ ಲಿ (ಎಂ.ಸಿ.ಸಿ. ಬ್ಯಾಂಕ್ ಲಿಮಿಟೆಡ್) ಉಡುಪಿ ಶಾಖೆಯ ಗ್ರಾಹಕ ಸಂಪರ್ಕ ಸಭೆಯು ಆಕ್ಟೋಬರ್ 23ರಂದು ಉಡುಪಿಯ ಶೋಖಮಾತೆಯ ಚರ್ಚಿನ, ಆವೆ ಮರಿಯ ಸಭಾಂಗಣದಲ್ಲಿ ಎಂ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಅನಿಲ್ ಲೋಬೊರವರ ಅಧ್ಯಕ್ಷತೆಯಲ್ಲಿ ಜರುಗಿತು.

ಉಡುಪಿಯ ಶೋಖಮಾತೆಯ ಚರ್ಚಿನ ಧರ್ಮಗುರುಗಳಾದ ವಂದನೀಯ ಗುರು ಚಾರ್ಲ್ಸ್ ಮಿನೆಜಸ್‌ರವರು ದೀಪ ಬೆಳಗಿಸುವ ಮೂಲಕ ಗ್ರಾಹಕರ ಸಭೆಯನ್ನು ಉದ್ಘಾಟಿಸಿ ಗ್ರಾಹಕರ ಅವಶ್ಯಕತೆಗಳನ್ನು ಅರಿತು ಕಾಳಜಿ ವಹಿಸಿದ್ದಕ್ಕಾಗಿ ಬ್ಯಾಂಕಿನ ಆಡಳಿತ ಮಂಡಳಿ ಮತ್ತು ಸಿಬ್ಬಂದಿಯನ್ನು ಅಭಿನಂದಿಸಿದರು. ಯಾವುದೇ ಕೆಲಸ ಇರಲಿ ಅದರ ಯಶಸ್ಸು ಮುಖ್ಯವಾಗಿ ಕಠಿಣ ಪರಿಶ್ರಮ ಮತ್ತು ಪರಸ್ಪರ ನಂಬಿಕೆಯನ್ನು ಅವಲಂಬಿಸಿರುತ್ತದೆ, ಬೆಳಕಿನ ಮಹತ್ವವನ್ನು ಸಾರಿದ ಅವರು, ನಮ್ಮೊಳಗಿನ ಅಜ್ಞಾನದ ಅಂಧಕಾರವನ್ನು ಹೋಗಲಾಡಿಸದಿದ್ದರೆ ಪ್ರಯೋಜನವಿಲ್ಲ, ಹಾಗೇನೇ ಸಮಾಜದ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವ ಮೂಲಕ ಬ್ಯಾಂಕ್ ಪ್ರಗತಿಯನ್ನು ಸಾಧಿಸಬಹುದು ಮತ್ತು ಇದರ ಮೂಲಕ ಇತರರ ಬದುಕಲ್ಲಿ ಬೆಳಕಾಗಬಹುದು. ಸದುದ್ದೇಶದಿಂದ ಮಾಡುವ ಯಾವುದೇ ಕಾರ್ಯಕ್ಕೆ ದೇವರ ಆಶೀರ್ವಾದ ಸದಾ ಇದ್ದೇ ಇರುತ್ತದೆ ಎಂದರು.

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಾಂಶುಪಾಲ ಡಾ। ವಿನ್ಸೆಂಟ್ ಆಳ್ವರವರು ಮುಖ್ಯ ಅತಿಥಿಯಾಗಿದ್ದರು. ಕಥೊಲಿಕ್ ಸಭಾ ಉಡುಪಿ ಪ್ರದೇಶದ ಅಧ್ಯಕ್ಷರಾದ ಮೇರಿ ಡಿಸೋಜ, ವಕೀಲರಾದ ಮಹಮ್ಮದ್ ಇಕ್ಬಾಲ್, ಜಿತಲ್ ಬಲರಾಮ್ ಪ್ರೈವೇಟ್ ಲಿಮಿಟೆಡ್‌ನ ಮಾಲಕರಾದ ಶನ್‌ರಾಜ್ ಕೋಟ್ಯಾನ್, ಎನ್.ಎನ್. ಇನ್‌ಫ್ರಾಸ್ಟ್ರಕ್ಚರ್ ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಪೀಟರ್ ಡಿಸೋಜ ಗೌರವಾನ್ವಿತ ಅತಿಥಿಗಳಾಗಿದ್ದರು.

ಬ್ಯಾಂಕಿನ ನಿರ್ದೇಶಕರುಗಳಾದ ಎಲ್‌ರೊಯ್ ಕಿರಣ್ ಕ್ರಾಸ್ಟೊ, ಜೋಸೆಫ್ ಅನಿಲ್ ಪತ್ರಾವೊ, ರೋಶನ್ ಡಿಸೋಜ, ಸುಶಾಂತ್ ಸಲ್ಡಾನ್ಹಾ, ಶರ್ಮಿಳಾ ಮಿನೇಜಸ್, ಆಲ್ವಿನ್ ಮೊಂತೇರೊ, ಫೆಲಿಕ್ಸ್ ಡಿಕ್ರೂಜ್ ಮತ್ತು ಉಪ ಮಹಾಪ್ರಬಂಧಕ ರಾಜ್ ಎಫ್. ಮಿನೆಜಸ್ ಉಪಸ್ಥಿತರಿದ್ದರು.

ಮಹಾಪ್ರಬಂಧಕ ಸುನಿಲ್ ಮಿನೆಜಸ್‌ರವರು ಗ್ರಾಹಕರ ಸಭೆಯ ಮಹತ್ವವನ್ನು ವಿವರಿಸಿದರು. ಉಡುಪಿ ಶಾಖಾ ಸಹಾಯಕ ನಿರ್ದೇಶಕರಾದ ಡಾ। ಜೆರಾಲ್ಡ್ ಪಿಂಟೊರವರು ಸ್ವಾಗತಿಸಿದರು. ಶಾಖಾ ಪ್ರಬಂಧಕ ಓವಿನ್ ರೆಬೆಲ್ಲೊ ವಂದಿಸಿ ಲೆಸ್ಲಿ ಆರೋಜಾರವರು ನಿರೂಪಿಸಿದರು.

# ಸೇಡಂನಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹ
## ರೈತರಿಗೆ 24000 ಕೋಟಿ ರೂ. ಸಾಲ : ಮುಖ್ಯಮಂತ್ರಿ ಘೋಷಣೆ



**ಸೇಡಂ (ಕಲಬುರಗಿ) :** ರಾಜ್ಯದ 32ಲಕ್ಷ ರೈತರಿಗೆ 24 ಸಾವಿರ ಕೋಟಿ ರೂಪಾಯಿ ಸಾಲ ನೀಡುವ ತೀರ್ಮಾನವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ಇದು ನಮ್ಮ ಸರ್ಕಾರ ಸಹಕಾರ ಕ್ಷೇತ್ರಕ್ಕೆ ಮತ್ತು ರೈತರಿಗೆ ಕೊಟ್ಟ ಕೊಡುಗೆಯಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಸೇಡಂ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ದಿನಾಂಕ:14.11.2022ರಂದು ಆಯೋಜಿಸಿದ್ದ 69ನೇ ಅಖಿಲ ಭಾರತ ಸಹಕಾರ ಸಪ್ತಾಹ 2022 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರೈತನ ಬದುಕು ಹಸನಾಗಬೇಕಾದರೆ ರೈತನಿಗೆ ಸ್ಕೇಲ್ ಆಫ್ ಫೈನಾನ್ಸ್ ಆಧಾರದಲ್ಲಿ ಬೆಳೆದ ಬೆಳೆಗೆ ದರ ನಿರ್ಧಾರವಾಗಬೇಕು. ಆ ಮೂಲಕ ರೈತ ಸ್ವಾವಲಂಬಿಯಾಗಬೇಕು. ಸ್ವಾಭಿಮಾನ ಇಲ್ಲದಲ್ಲಿ ಆತ್ಮಾಭಿಮಾನವಿಲ್ಲ. ಆತ್ಮಾಭಿಮಾನವಿಲ್ಲದಲ್ಲಿ ಸಾಧನೆಯಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಜಾರಿಗೆ ತಂದಿರುವ ಕಾಯಕ ಯೋಜನೆಗಳ ಅನುಷ್ಠಾನವಾಗಬೇಕು. ರೈತರಿಗೆ ಅಲ್ಪಾವಧಿ ಸಾಲ ವಿತರಣೆಯಾಗಬೇಕು ಎಂದರು. ಮನುಷ್ಯ ಸಂಘ ಜೀವಿ ಮನುಷ್ಯನ ಜೀವನದ ಪ್ರತಿ ಹಂತವೂ ಸಮಾಜದೊಂದಿಗಿನ ಪರಸ್ಪರ ಸಹಕಾರದ ಮೇಲೆ ಅವಲಂಬನೆಯಾಗಿದೆ. ಹಾಗಾಗಿ ಸಹಕಾರವು ಮನುಕುಲದ ಸಹಜ ಹಾಗೂ ನೈಜ ಧರ್ಮ. ನಾವು ಭಾರತೀಯರು ಎನ್ನುವುದೇ ನಮ್ಮ ಅಸ್ತಿತ್ವ. ಇಡೀ ನಮ್ಮ ಬದುಕೇ ಸಹಕಾರದ ಮೇಲೆ ಆಧಾರವಾಗಿದೆ. ಸಹಕಾರದಿಂದ ಏನಾದರೂ ಸಾಧಿಸಬಹುದು ಎಂದರು. ಮುಚ್ಚುವ ಹಂತದಲ್ಲಿದ್ದ ಕಲಬುರಗಿ ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ಪುನಶ್ಚೇತನಗೊಳಿಸಿ ಇಲ್ಲಿಯವರಗೆ 2ಲಕ್ಷ ರೈತರಿಗೆ ಸಾಲ ಕೊಟ್ಟ ಬ್ಯಾಂಕಿನ ಅಧ್ಯಕ್ಷ ಸೇಡಂ ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ್ ಅವರು ರೈತರ ಬದುಕು ಉದ್ದಾರದ ಕೆಲಸ ಮಾಡಿದ್ದಾರೆ. ಇದು ಬಹು ದೊಡ್ಡ ಕೊಡುಗೆ ಎಂದು ಶಾಸಕ ತೇಲ್ಕೂರ್ ಕೆಲಸಗಳನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಮುರುಗೇಶ ನಿರಾಣಿ, ಕೇಂದ್ರ ಸಚಿವ ಭಗವಂತ ಖೂಬಾ, ಸಂಸದ ಉಮೇಶ ಜಾಧವ, ಸೇಡಂ ಶಾಸಕ ಹಾಗೂ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ರಾಜಕುಮಾರ ಪಾಟೀಲ ತೇಲ್ಕೂರ್ ಮಾತನಾಡಿದರು. ಇದೇ ವೇಳೆ ಸೇಡಂ ಶಾಸಕ ರಾಜಕುಮಾರ್ ಪಾಟೀಲ್ ತೇಲ್ಕೂರ್ ಸೇರಿದಂತೆ ಹದಿನಾಲ್ಕು ಮಂದಿಗೆ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಬಸವರಾಜ ಪಾಟೀಲ ಸೇಡಂ, ಶಾಸಕರಾದ ರಾಜುಗೌಡ, ಬಾಬುರಾವ್ ಚಿಂಚನಸೂರ, ಬಸವರಾಜ ಮತ್ತಿಮೂಡ, ಡಾ. ಅವಿನಾಶ ಜಾಧವ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಡಿ.ಯು.ಸಿ.ಬಿ.ಎಂ. ಕೋರ್ಸ್‌ನಲ್ಲಿ ಬಸವೇಶ್ವರ ಬ್ಯಾಂಕಿಗೆ 8 ಹಾಗೂ 9ನೇ ರ್‍ಯಾಂಕ್




**ಬಾಗಲಕೋಟ :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರು ಪ್ರತಿ ವರ್ಷ ಜರುಗಿಸುವ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (Diploma in Urban Cooperative Banking Management) ಕೋರ್ಸ್‌ನಲ್ಲಿ ಕರ್ನಾಟಕ ರಾಜ್ಯಕ್ಕೆ ಶ್ರೀ ಬಸವೇಶ್ವರ ಸಹಕಾರ ಬ್ಯಾಂಕ ನಿ., ಬಾಗಲಕೋಟನ ಸಿಬ್ಬಂದಿ ವೆಂಕಟೇಶ ರಾಥೋಡ 8ನೇ ರ್‍ಯಾಂಕ ಹಾಗೂ ಶ್ರೀಧರ ಸಾಳುಂಕೆ 9ನೇ ರ್‍ಯಾಂಕ ಪಡೆದು ಬ್ಯಾಂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಬ್ಯಾಂಕಿನ ಅಧ್ಯಕ್ಷರಾದ ಪ್ರಕಾಶ ತಪಶೆಟ್ಟಿಯವರು ಹಾಗೂ ನಿರ್ದೇಶಕ ಮಂಡಳಿಯ ಸರ್ವ ಸದಸ್ಯರು ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ. ದಿನಾಂಕ:18.09.2022ರಂದು ಜರುಗಿದ ಬ್ಯಾಂಕಿನ 105ನೇ ವರ್ಷದ ವಾರ್ಷಿಕ ಮಹಾಸಭೆಯಲ್ಲಿ ವೆಂಕಟೇಶ ರಾಥೋಡ ಹಾಗೂ ಶ್ರೀಧರ ಸಾಳುಂಕೆಯನ್ನು ಅಧ್ಯಕ್ಷರು ಸನ್ಮಾನಿಸಿದರು. ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ವ್ಹಿ.ಸಿ. ಕೇಮಾಳಿ, ಆಡಳಿತಾಧಿಕಾರಿ ಬಿ.ಎಸ್. ನಾವಲಗಿ, ಅಧಿಕಾರಿಗಳಾದ ಪಿ.ಎನ್. ಹಳ್ಳಿಕೇರಿ, ಎಮ್.ಎಸ್. ಗುಡಗುಂಟಿ, ವ್ಹಿ.ಎಮ್.ಹಿರೇಮಠ, ಶ್ರೀಮತಿ ಜ್ಯೋತಿ ನಾವಲಗಿ, ಶಾಖಾ ವ್ಯವಸ್ಥಾಪಕರು, ಎಲ್ಲ ಸಿಬ್ಬಂದಿಯವರು ಅಭಿನಂದನೆ ಸಲ್ಲಿಸಿದ್ದಾರೆ ಹಾಗೂ ಬ್ಯಾಂಕಿನ ಎಲ್ಲ ಶಾಖೆಗಳ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 15 ಜನ ಸಿಬ್ಬಂದಿಗಳು ಪ್ರಥಮ ವರ್ಗದಲ್ಲಿ, 7ಜನ ಸಿಬ್ಬಂದಿಗಳು ದ್ವಿತೀಯ ವರ್ಗದಲ್ಲಿ ಪಾಸಾಗಿರುವುದು ಹೆಮ್ಮೆಯ ವಿಷಯ.

# ಸಹಕಾರಿ ಕ್ಷೇತ್ರದಲ್ಲಿ ಕರ್ನಾಟಕ್ಕೆ 2ನೇ ಸ್ಥಾನ : ಸಚಿವ ಎಸ್.ಟಿ. ಸೋಮಶೇಖರ್



**ಮಂಗಳೂರು :** ದಿನಾಂಕ : 18.11.2022ರಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು ಇವರ ನೇತೃತ್ವದಲ್ಲಿ ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಜರುಗಿದ 69ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರ್ ರವರು ಉದ್ಘಾಟಿಸಿ ಮಾತನಾಡಿ ಕೋಟ್ಯಂತರ ಜನರಿಗೆ ಅನುಕೂಲವಾಗಿರುವ ಸಹಕಾರಿ ಕ್ಷೇತ್ರದ ಪ್ರಗತಿಯಲ್ಲಿ ದೇಶದಲ್ಲಿಯೇ ಕರ್ನಾಟಕ ಎರಡನೇ ಸ್ಥಾನ ಪಡೆದಿರುವುದು ಹೆಮ್ಮೆಯ ವಿಚಾರ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು. ರಾಜ್ಯದಲ್ಲಿನ 256ರ ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ಬಹುತೇಕ ಬ್ಯಾಂಕ್‌ಗಳು 'ಎ' ಶ್ರೇಣಿ ಹೊಂದಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಕ್ರೆಡಿಟ್ ಸೊಸೈಟಿ, 21 ಡಿಸಿಸಿ ಬ್ಯಾಂಕ್‌ಗಳು ಲಾಭದಲ್ಲಿದ್ದು, ಲಕ್ಷಾಂತರ ರೈತರಿಗೆ ಸೌಲ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಮಾತನಾಡಿ ದಕ್ಷಿಣ ಕನ್ನಡ ಜಿಲ್ಲೆಯ 160ಕ್ಕೂ ಅಧಿಕ ಪ್ರಾಥಮಿಕ ಸಂಘಗಳು ಲಾಭದಲ್ಲಿದ್ದು, ಸ್ವಂತ ಕಟ್ಟಡ ಹೊಂದಿವೆ. ಅಪೆಕ್ಸ್, ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳು ಬಲಿಷ್ಠವಾಗಿ ಬೆಳೆಯುತ್ತಿರುವುದು ಸಂತಸದ ವಿಚಾರ. ಮಹಿಳಾ ಸಂಘಕ್ಕೆ ನೀಡಿದ ಸಾಲ ಶೇ.100ರಷ್ಟು ಮರುಪಾವತಿ ಮಾಡುವ ಮೂಲಕ ನಾರಿ ಶಕ್ತಿ ಹಾಗೂ ಸಹಕಾರಿ ಶಕ್ತಿ ಜತೆಗೂಡಿದಾಗ ದೊಡ್ಡ ಕ್ರಾಂತಿ ಸಾಧ್ಯ ಎಂದು ತೋರಿಸಿಕೊಟ್ಟಿದ್ದಾರೆ ಎಂದರು.

ಸಹಕಾರ ಸಪ್ತಾಹದಲ್ಲಿ ಕ್ಯಾಂಪ್ಕೊದ ಮಾಜಿ ಅಧ್ಯಕ್ಷ ಕೊಂಕೋಡಿ ಪದ್ಮನಾಭ, ಸುಳ್ಯದ ಟಿಎಪಿಸಿಎಂಎಸ್ ಅಧ್ಯಕ್ಷ ನಿತ್ಯಾನಂದ ಮುಂಡೋಡಿ, ಹಿರಿಯ ಸಹಕಾರಿ ಸದಾಶಿವ ರೈ ದಂಬೆಕಾನ, ಉಡುಪಿ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ ಹಾಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಮೀನು ಮಾರಾಟ ಮಹಾಮಂಡಳದ ಅಧ್ಯಕ್ಷ ಯಶ್‌ಪಾಲ್ ಸುವರ್ಣ ಅವರಿಗೆ ಸಹಕಾರ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಾನಾ ಸಹಕಾರ ಸಂಘಗಳಿಗೆ ನಾನಾ ವಿಭಾಗಗಳಲ್ಲಿ ಪ್ರಶಸ್ತಿಯನ್ನು ನೀಡಲಾಯಿತು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶಾಸಕರುಗಳಾದ ವೇದವ್ಯಾಸ ಡಿ. ಕಾಮತ್, ಯು.ಟಿ. ಖಾದರ್, ಕ್ಯಾಂಪ್ಕೋ ಅಧ್ಯಕ್ಷ ಕಿಶೋರ್ ಕುಮಾರ್ ಕೊಡ್ಗಿ, ಸಹಕಾರ ಸಂಘಗಳ ನಿಬಂಧಕ ಕ್ಯಾಪ್ಟನ್ ಡಾ॥ ಕೆ. ರಾಜೇಂದ್ರ, ಮತ್ತಿತರರು ಉಪಸ್ಥಿತರಿದ್ದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಸಿ.ಡಿ.ರೇಷಿಯೋ ಹೆಚ್ಚಾಗಿದೆ ಎಂದು ಭಾರತೀಯ ರಿಜರ್ವ್ ಬ್ಯಾಂಕು ಸೂಚಿಸಿದೆ. ನಾವು ಸಿ.ಡಿ.ರೇಷಿಯೋ ಲೆಕ್ಕಾಚಾರ ಮಾಡುವಾಗ ಬ್ಯಾಂಕಿನ ಉಳಿತಾಯ ಖಾತೆ, ಚಾಲ್ತಿ ಖಾತೆ ಮತ್ತು ಅವಧಿ ಠೇವಣಿ ಖಾತೆಗಳಲ್ಲಿರುವ ಮೊತ್ತವನ್ನು ಒಟ್ಟು ಠೇವಣಿ ಎಂದು ಪರಿಗಣಿಸುತ್ತಿದ್ದೇವೆ. ಆದರೆ, ಡಿಪಾಸಿಟ್ ಇನ್ಸೂರೆನ್ಸ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್ ಇವರಿಗೆ ಕಳಿಸುವ ವಿಮಾ ಪ್ರೀಮಿಯಂ ಲೆಕ್ಕ ಹಾಕುವಾಗ ಇತರ ಹೊಣೆಗಾರಿಕೆ ಖಾತೆಯಲ್ಲಿ ಮತ್ತು ಪೇ–ಆರ್ಡರ್ ಖಾತೆಯಲ್ಲಿರುವ ಮೊತ್ತವನ್ನು ಕೂಡಾ ಠೇವಣಿಯೆಂದು ಪರಿಗಣಿಸಿ ಒಟ್ಟು ಮೊತ್ತದ ಮೇಲೆ ವಿಮಾ ಮೊತ್ತವನ್ನು ಸಂದಾಯ ಮಾಡುತ್ತಿದ್ದೇವೆ. ಆದ್ದರಿಂದ, ನಾವು ಇತರ ಹೊಣೆಗಾರಿಕೆ (Other liability) ಮತ್ತು ಪೇ–ಆರ್ಡರ್ ಮೊತ್ತವನ್ನು ಸಿ.ಡಿ. ರೇಷಿಯೋ ತಃಖ್ತೆಯಲ್ಲಿ ತೋರಿಸಿದಲ್ಲಿ ಏನಾದರೂ ಅಡಚಣೆ ಇದೆಯೇ ಎಂಬುದರ ಬಗ್ಗೆ ತಮ್ಮ ಸಲಹೆಯನ್ನು ನೀಡಲು ವಿನಂತಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ದಾವಣಗೆರೆ.**

**ಉತ್ತರ :** ಇತರ ಹೊಣೆಗಾರಿಕೆ ಖಾತೆ ಮತ್ತು ಪೇ–ಆರ್ಡರ್ ಖಾತೆಯಲ್ಲಿರುವ ಮೊತ್ತವನ್ನು ಸಿ.ಡಿ.ರೇಷಿಯೋ ಲೆಕ್ಕ ಹಾಕುವಾಗ "ಠೇವಣಿ" ಎಂದು ಪರಿಗಣಿಸುವಂತಿಲ್ಲ. ಬ್ಯಾಂಕುಗಳು ದ್ರವ್ಯತೆ ಅಪಾಯಕ್ಕೆ (Liquidity risk) ಸಿಕ್ಕಿ ಹಾಕುವುದನ್ನು ತಪ್ಪಿಸಲು ರಿಜರ್ವ್ ಬ್ಯಾಂಕು ಬ್ಯಾಂಕುಗಳ ಕ್ರೆಡಿಟ್ ಠೇವಣಿ ಅನುಪಾತದ ಮೇಲೆ ಮಿತಿಯನ್ನು ಹೇರಿದೆ. ನಿಮ್ಮ ದ್ರವ್ಯತೆ ಅಪಾಯದ ಬಗ್ಗೆ ಇರುವ ಶಂಕೆಯನ್ನು ದೂರಗೊಳಿಸಲು "ಲಭ್ಯವಿರುವ ಸಾಲದ ಸಂಪನ್ಮೂಲಗಳಿಗೆ ನಿವ್ವಳ ಸಾಲದ ಅನುಪಾತ" (Ratio of net credit to available Lendable resources) ವನ್ನು ರಿಜರ್ವ ಬ್ಯಾಂಕಿಗೆ ತಿಳಿಸಿ. ಈ ಅನುಪಾತವನ್ನು ಲೆಕ್ಕ ಹಾಕುವಾಗ ಬಂಡವಾಳದ ಶೇ.75ರಷ್ಟನ್ನು ಠೇವಣಿ ಮೊತ್ತಕ್ಕೆ ಸೇರಿಸಲಾಗುವುದು. ಈ ಹೊಸ ಅನುಪಾತ ಶೇ.70ಕ್ಕಿಂತ ಕಡಿಮೆ ಇರುವಂತೆ ಜಾಗ್ರತೆ ವಹಿಸಿ.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬಾಗಲಕೋಟೆಯಲ್ಲಿ ಕೇವಲ 9.80 ಡಿಗ್ರಿ ತಾಪಮಾನ ದಾಖಲಾಗಿದ್ದರೆ, ಉಳಿದೆಡೆ 10 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ತಾಪಮಾನ ದಾಖಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ತಾಪಮಾನ ಮತ್ತಷ್ಟು ಕುಸಿಯಲಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.
- ಬಿಹಾರದ ಜೆಹಾನಾಬಾದ್‌ನ ರಾಜೇಂದ್ರ ಚೌಹಾನ್ ಎಂಬ ವಯೋವೃದ್ಧರೊಬ್ಬರ ರೂ. 18,000 ಮೊತ್ತದ ಬ್ಯಾಂಕ್ ಸಾಲ ಪಾವತಿಸಲಾಗದ ದುಸ್ಥಿತಿ ಕಂಡು ಮರುಗಿದ ಅಲ್ಲಿನ ಜಿಲ್ಲಾ ನ್ಯಾಯಾಧೀಶರು ವೃದ್ಧರ ಬಾಕಿ ಸಾಲವನ್ನು ತೀರಿಸಿದ್ದಾರೆ.
- ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಹಾಗಲವಾಡಿ ಹೋಬಳಿಯ ಅರೇಹಳ್ಳಿ ನಂಜೇಗೌಡ ನಟರಾಜು ಎಂಬ ರೈತರೊಬ್ಬರು ಕೊಬ್ಬರಿ ಮಾರಾಟ ಮಾಡಿ ಸಂಪಾದಿಸಿದ ರೂ.1.5 ಲಕ್ಷ ಹಣದಲ್ಲಿ 400 ಮೀಟರ್ ರಸ್ತೆ ದುರಸ್ತಿ ಕಾರ್ಯ ಮಾಡಿದ್ದಾರೆ.
- ಮೈಸೂರಿನಲ್ಲಿ ನಿಧನರಾದ ಶಿವಮ್ಮ ಎಂಬ ಮಹಿಳೆಯೊಬ್ಬರ ಅಂತ್ಯ ಸಂಸ್ಕಾರವನ್ನು ಮುಸ್ಲಿಂ ಬಾಂಧವರು ಹಿಂದೂ ಸಂಪ್ರದಾಯದಂತೆ ನೆರವೇರಿಸುವ ಮೂಲಕ ಭಾವೈಕ್ಯತೆ ಮೆರೆದಿದ್ದಾರೆ.
- ಕೋವಿಡ್ ಸಾಂಕ್ರಾಮಿಕ ಕರ್ನಾಟಕದಲ್ಲಿ ಬಾಲ ಕಾರ್ಮಿಕ ಪ್ರಕರಣಗಳಲ್ಲಿ ಹೆಚ್ಚಳ ಉಂಟು ಮಾಡಿದ್ದು, ರಾಜ್ಯದ ಸಾವಿರಾರು ಮಕ್ಕಳು ಮುಖ್ಯವಾಹಿನಿಯಿಂದ ಹೊರಗುಳಿದಿದ್ದಾರೆ ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ.
- ಬೆಂಗಳೂರಿನ ಮುತ್ತುರಾಯ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೂಲಸೌಕರ್ಯಗಳ ಜತೆಗೆ, ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದ್ದು, ಸ್ಥಿತಿವಂತರೂ ತಮ್ಮ ಮಕ್ಕಳನ್ನು ಸೇರಿಸಲು ದುಂಬಾಲು ಬೀಳುತ್ತಿದ್ದಾರೆ.
- ಬೆಂಗಳೂರಿನಲ್ಲಿ ಮೆಟ್ರೊ, ಬಸ್, ಟ್ಯಾಕ್ಸಿ, ಆಟೊ, ಬಾಡಿಗೆ ದ್ವಿಚಕ್ರ ವಾಹನ ಹೀಗೆ ವಾಹನಗಳಲ್ಲೂ ಜನ ಸಂಚರಿಸಲು ಅನುವು ಮಾಡಿಕೊಡುವಂತಹ ರಾಷ್ಟ್ರೀಯ ಸಾಮಾನ್ಯ ಸಾರಿಗೆ ಕಾರ್ಡ್ ಅನ್ನು ಮುಂದಿನ ದಿನಗಳಲ್ಲಿ ಪರಿಚಯಿಸಲಾಗುವುದು.
- ಬಿಳಿಗಿರಿರಂಗನ ಬೆಟ್ಟದಲ್ಲಿ ಹೆಜ್ಜೇನು, ತುಡುವೆ, ಕೋಲು, ನೆಸರೆ ಹಾಗೂ ನೇರಳೆ ಎಂಬ ಐದು ರೀತಿಯ ಜೇನು ಸಿಗುತ್ತಿದ್ದು, ನೇರಳೆ ಹೂಗಳಿಂದ ಮಕರಂದ ಹೀರುವ ಜೇನು ಕಹಿರುಚಿ ಕೊಡುವುದು ವಿಶೇಷವಾಗಿದ್ದು, ಈ ಜೇನುತುಪ್ಪದಲ್ಲಿ ಔಷಧ ಗುಣಗಳು ಹೆಚ್ಚಾಗಿದ್ದು, ಮಧುಮೇಹಿಗಳು ಇದನ್ನು ಕೊಂಡೊಯ್ಯುತ್ತಾರೆ.

## ಓದುಗರ ಅನಿಸಿಕೆ...




**ವೃತ್ತಿಪರ ತರಬೇತಿಯ ಅಗತ್ಯವಿದೆ :** ನಮ್ಮ ಸಹಕಾರ ಆಂದೋಲನವು ವಿಶ್ವದ ಅತಿದೊಡ್ಡ ಚಳುವಳಿಯಾಗಿ ಬೆಳೆದಿದೆ. ದೇಶದಲ್ಲಿ 8.5 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಘಗಳು ಸಾಮಾಜಿಕ, ಆರ್ಥಿಕ ಚಟುವಟಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಸಹಕಾರ ಕ್ಷೇತ್ರದ ಚಟುವಟಿಕೆ ಇನ್ನಷ್ಟು ವಿಸ್ತರಿಸುವ ಸಲುವಾಗಿ ಯುವಕರಿಗೆ ವೃತ್ತಿಪರ ತರಬೇತಿಯ ಅಗತ್ಯವಿದೆ.

▸▸ **ವಿಷ್ಣುಪ್ರಿಯ ಭಾರ್ಗವ, ಮೈಸೂರು**

**ಜಿಎಸ್‌ಟಿಯಲ್ಲೂ ತೆರಿಗೆ ವಂಚನೆ :** ಕಳೆದ ಎರಡು ವರ್ಷಗಳಲ್ಲಿ ರೂ. 55,575 ಕೋಟಿ ರೂಪಾಯಿ ಜಿಎಸ್‌ಟಿ ವಂಚನೆಯಾಗಿರುವುದಾಗಿ ವರದಿಯಾಗಿರುವುದು ಆಶ್ಚರ್ಯಕರವಾಗಿದೆ. ಹಿಂದಿನ ತೆರಿಗೆ ಪದ್ಧತಿಯಲ್ಲಿ ಅಪಾರ ತೆರಿಗೆ ವಂಚನೆ ಮಾಡಲಾಗುತ್ತಿತ್ತು ಆದರೆ, ಜಿಎಸ್‌ಟಿಯಲ್ಲಿ ಯಾವುದೇ ರೀತಿಯ ವಂಚನೆಗೂ ಅವಕಾಶವಿಲ್ಲ ಎಂದು ಈ ಪದ್ಧತಿ ಜಾರಿಗೆ ತರುವಾಗ ಹೇಳಿಕೊಳ್ಳಲಾಗಿತ್ತು!

▸▸ **ಶಿವಾನಂದ ಪಿ.ಆರ್., ಮಂಡ್ಯ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.